| 1 | 2 | 3 | 4 |
|---|---|---|---|
| 15. | ಎತ್ತಗದಹಳ್ಳಿ | 200 | 22.00 |
| 16. | ಮರಿಲಿಂಗನದೊಡ್ಡಿ | 450 | 33.00 |
| 17. | ಕೀಲಾರ | 800 | 22.00 |
| | **ಒಟ್ಟು** | **7208** | **593.45** |

ಇ) ಏರು ಕೊಳವೆಗೆ ( ರೈಸಿಂಗ್ ಮೈನ್ ) ಅಳವಡಿಸಲು ಅಗತ್ಯವಿರುವ ವಿವಿಧ ವ್ಯಾಸಗಳ ಆರ್.ಸಿ.ಸಿ ಪ್ರೆಷರ್ ಪೈಪು ಮತ್ತು ಕಾಲರ್‌ಗಳ ದರಗಳನ್ನು 1997-98 ನೇ ಸಾಲಿನ ನಂತರ ಸದರಿ ವಿಲೇದಿ ನಿರ್ದೇಶನಾಲಯ, ಬೆಂಗಳೂರು, ಇವರಿಂದ ಅನುಮೋದನೆಯಾಗದ ಕಾರಣದಿಂದ ಪೈಪುಗಳನ್ನು ಹಾಗೂ ಕಾಲರ್‌ಗಳನ್ನು ಖರೀದಿಸಲು ವಿಳಂಬವಾಗಿದೆ ಹಾಗೂ ಸ್ವಾಧೀನ ಪ್ರಕರಣಗಳಿಂದ ವಿಳಂಬ ಮತ್ತು ನಿಂತ ಬೆಳೆಗಳನ್ನು ತೆಗೆಯಲು ರೈತರಿಂದ ಕಾಲಾವಕಾಶ ಕೋರಿಕೆಯಿಂದ ವಿಳಂಬವಾಗಿರುತ್ತದೆ. ಆದಾಗ್ಯೂ ಈಗ ಸದರಿ ಪೈಪು ಮತ್ತು ಕಾಲರ್‌ಗಳ ದರ ವಿಶ್ಲೇಷಣೆಯನ್ನು ಮಾಡಲಾಗಿದ್ದು, ಪೈಪುಗಳನ್ನು ಖರೀದಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಅಗತ್ಯಕ್ರಮ ಕೈಗೊಳ್ಳಲಾಗುತ್ತಿದೆ.

ಈ) ರೈಸಿಂಗ್ ಮೈನ್ ಪೈಪುಗಳನ್ನು ಸರಬರಾಜು ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಪೂರ್ಣಗೊಂಡ ಎತ ನೀರಾವರಿ ಯೋಜನೆಗಳ ವಿದ್ಯುತ್ ಮತ್ತು ಮೆಕ್ಯಾನಿಕಲ್ ಸರಬರಾಜಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ ಹಾಗೂ ಕೆಲವು ಏತ ನೀರಾವರಿ ಯೋಜನೆಗಳಿಗೆ ಯಂತ್ರೋಪಕರಣಗಳು ಸರಬರಾಜಾಗಿದೆ. ಸದರಿ ಯೋಜನೆಗಳನ್ನು ಮುಗಿಸಲು ನಿರ್ದಿಷ್ಟ ಕಾಲ ಮಿತಿಯನ್ನು ಹಾಕಿಕೊಂಡಿದ್ದು, ಅದರನ್ವಯ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

**ರಾಜ್ಯದಲ್ಲಿ ಅಧಿಕ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸಲು ಕೈಗೊಂಡಿರುವ ಕ್ರಮಗಳು**

1154 ( 1698) ಶ್ರೀ ಆತ್ಮಾನಂದ ಎಂ. ಎಸ್. ( ಮಂಡ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪ್ರಸ್ತುತ ಉತ್ಪಾದನೆ ಮಾಡುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು;

ಆ) ರಾಜ್ಯದಲ್ಲಿ ಬೇಡಿಕೆ ಇರುವ ವಿದ್ಯುತ್ತಿನ ಪ್ರಮಾಣವೆಷ್ಟು;

ಇ) ರಾಜ್ಯದಲ್ಲಿ ಅವಶ್ಯಕತೆ ಇರುವ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತಿದೆಯೇ;

ಈ) ಹಾಗಿಲ್ಲದಿದ್ದರೆ, ವಿದ್ಯುತ್ ಉತ್ಪಾದನೆಯ ಪ್ರಮಾಣವನ್ನು ಅಧಿಕಗೊಳಿಸಲು ಮತ್ತು ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ರಾಜ್ಯದಲ್ಲಿ ಕೈಗೊಂಡಿರುವ ಕ್ರಮಗಳೇನು?

ಶ್ರೀ ವೀರಕುಮಾರ ಆ.ಪಾಟೀಲ್ ( ಇಂಧನ ರಾಜ್ಯ ಸಚಿವರು)

ಅ) ವಿದ್ಯುತ್ ಉತ್ಪಾದನೆಯು ದೈನಂದಿನ ಬೇಡಿಕೆಯನ್ನು ಅವಲಂಬಿಸಿರುತ್ತದೆ. ದೈನಂದಿನ ಬೇಡಿಕೆಯು ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಪ್ರಸ್ತುತ ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ

ಕೇಂದ್ರಗಳಿಂದ ದಿನವಹಿ ಸರಾಸರಿ 73.8 ದಶಲಕ್ಷ ಯೂನಿಟ್‌ಗಳ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಅಲ್ಲದೇ ಕೇಂದ್ರ ವಿದ್ಯುತ್ ಉತ್ಪಾದನೆ ಸ್ಥಾವರಗಳಿಂದ ರಾಜ್ಯಕ್ಕೆ ಸುಮಾರು ದಿನವಹಿ 19.2 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಪ್ರಸ್ತುತ ಲಭ್ಯವಾಗುತ್ತಿದೆ.

ಆ) ಪ್ರಸಕ್ತ ವರ್ಷವಾದ 2000-2001 ರಲ್ಲಿ ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆ ಸುಮಾರು 30200 ದಶಲಕ್ಷ ಯೂನಿಟ್‌ಗಳೆಂದು ಅಂದಾಜು ಮಾಡಲಾಗಿದೆ.

ಇ) ಇಲ್ಲ. ರಾಜ್ಯವು ಪ್ರಸಕ್ತ ವರ್ಷವಾದ 2000-2001 ರಲ್ಲಿ ಸುಮಾರು 1900 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ.

ಈ) ವಿದ್ಯುತ್ ಕೊರತೆಯನ್ನು ನೀಗಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಸಕ್ಕರೆ ಕಾರ್ಖಾನೆಗಳಲ್ಲಿಯೂ ಸಹ ಉತ್ಪಾದನೆಯಾಗಿ ( ವಿದ್ಯುತ್ತನ್ನು ಉತ್ಪಾದಿಸಲು ಸರ್ಕಾರವು ಉತ್ತೇಜನ ನೀಡುತ್ತಿದೆ. ಇಂತಹ 6 ಕಾರ್ಖಾನೆಗಳಿಂದ ಸುಮಾರು 104 ಮೆ.ವ್ಯಾನಷ್ಟು ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಅಲ್ಲದೇ, ಖಾಸಗೀ ಕ್ಷೇತ್ರದಲ್ಲಿ ಕಿರು ಜಲ ವಿದ್ಯುತ್ ಮತ್ತು ಗಾಳಿ ಆಧಾರಿತ ವಿದ್ಯುತ್ ಯೋಜನೆಗಳ ಸರಬರಾಜಿಗೆ ಹೆಚ್ಚಿನ ಉತ್ತೇಜನವನ್ನು ನೀಡಲಾಗುತ್ತಿದೆ. ಪ್ರಸ್ತುತ 124.4 ಮೆ.ವ್ಯಾಟ್‌ನಷ್ಟು ಕಿರು ಜಲ ವಿದ್ಯುತ್ ಮತ್ತು ಗಾಳಿ ಆಧಾರಿತ ವಿದ್ಯುತ್ ಯೋಜನೆಗಳು ಖಾಸಗೀ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

2. ಸುಮಾರು 8249 ಮೆ.ವ್ಯಾಟ್‌ನಷ್ಟು ಸಮಾರ್ಥ್ಯದ ವಿದ್ಯುತ್ ಉತ್ಪಾದನೆಗೆ ಕರ್ನಾಟಕ ಸರ್ಕಾರವು ಖಾಸಗೀ ರಂಗದಲ್ಲಿ ಹಲವಾರು ಸಂಘ ಸಂಸ್ಥೆಗಳಿಗೆ ಅನುಮೋದನೆಯನ್ನು ನೀಡಿರುತ್ತದೆ. ಈಗಾಗಲೇ ರಾಯಲ್ ಸೀಮಾ ಅಲ್ಕಲೀಸ್ ಲಿಮಿಟೆಡ್, ಬಳ್ಳಾರಿ ರವರು 289 ಮೆ.ವ್ಯಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆಯನ್ನು ನಿರ್ಮಾಣ ಮಾಡಿ ಕಾರ್ಯೋನ್ಮುಖಗೊಳಿಸಿರುತ್ತಾರೆ. ಟಾಟಾ ಪವರ್ ಕಂಪನಿಯು ಬೆಳಗಾವಿಯಲ್ಲಿ 81 ಮೆ.ವ್ಯಾ. ಸಾಮರ್ಥ್ಯದ ವಿದ್ಯುತ್ ಯೋಜನೆಯ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದು,ಇದು ಮುಕ್ತಾಯದ ಹಂತದಲ್ಲಿರುತ್ತದೆ ಮಂಗಳೂರಿನಲ್ಲಿ ತಣ್ಣೀರು ಬಾವಿ ಕಂಪನಿಯು ಒಂದು ಬಾರ್ಜ್ ಮೌಂಟೆಡ್ ( ಸುಮಾರು 220 ಮೆ.ವಾ.) ವಿದ್ಯುತ್ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದ್ದು, ಈ ಯೋಜನೆಯೂ ಸಹಾ ಮುಕ್ತಾಯದ ಹಂತದಲ್ಲಿರುತ್ತದೆ.

3. ಹೊಸ ಸ್ವತಂತ್ರ ವಿದ್ಯುತ್ ಉತ್ಪಾದನಾ ಯೋಜನೆಗಳಿಂದ ಮಾಡಿಕೊಂಡ ವಿದ್ಯುತ್ ಖರೀದಿ ಒಪ್ಪಂದಗಳ ಪ್ರಕಾರ ವಿದ್ಯುತ್ತನ್ನು ಪಡೆಯಲಾಗುತ್ತಿದೆ.

4. ಪೂರ್ವ ವಲಯದಲ್ಲಿ ಎನ್.ಟಿ.ಪಿ.ಸಿ. ಕೇಂದ್ರ ಘಟಕಗಳಿಂದ ಉತ್ಪಾದನೆಗೊಂಡ ವಿದ್ಯುತ್ತಿನ ದಿನವಹಿ ಸರಾಸರಿ 1.5 ರಿಂದ 2 ದಶಲಕ್ಷ ಯೂನಿಟ್ಟುಗಳ ಪ್ರಮಾಣದಲ್ಲಿ ಪಡೆಯಲಾಗುತ್ತಿದೆ.

5. ಇತ್ತೀಚೆಗೆ ಗೇರುಸೊಪ್ಪದ ಜಲ ವಿದ್ಯುತ್ ಯೋಜನೆಯಲ್ಲಿ ಕರ್ನಾಟಕ ವಿದ್ಯುತ್ ನಿಗಮವು 60 ಮೆ.ವ್ಯಾ. ಸಾಮರ್ಥ್ಯದ ಮೊದಲ ವಿದ್ಯುತ್ ಉತ್ಪಾದನಾ ಘಟಕವನ್ನು ಕಾರ್ಯೋನ್ಮುಖಗೊಳಿಸಿ, ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಿರುತ್ತದೆ.

ರಾಜ್ಯ ಸರ್ಕಾರವು , ಖಾಸಗೀ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನೆ ಪ್ರೋತ್ಸಾಹ ನೀಡುತ್ತಿದ್ದು, ಸುಮಾರು 1050 ಮೆ.ವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆ ದೊರಕುವ ನಿರೀಕ್ಷೆ ಇರುತ್ತದೆ. ಹಾಗೂ ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರದ ಉತ್ಪಾದನಾ ಯೋಜನೆಗಳಿಂದ ಸುಮಾರು 667 ಮೆ.ವ್ಯಾಟ್‌ನಷ್ಟು ಹೆಚ್ಚಿನ ವಿದ್ಯುತ್ 2004-2005 ರ ವೇಳೆಗೆ ದೊರಕುವ ಸಂಭವ ಇರುತ್ತದೆ. ಕರ್ನಾಟಕ ವಿದ್ಯುತ್ ನಿಗಮದ ಯೋಜನೆಗಳೂ ಸೇರಿದಂತೆ, ಒಟ್ಟಾರೆ ಮುಂದಿನ 5 ವರ್ಷಗಳ ಅವಧಿಯಲ್ಲಿ ಸುಮಾರು 3000 ಮೆ.ವ್ಯಾಟ್‌ನಷ್ಟು ಹೊಸದಾಗಿ ವಿದ್ಯುತ್ ಲಭ್ಯವಾಗುವ ನಿರೀಕ್ಷೆ ಇರುತ್ತದೆ.

**ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ**

1155 ( 1699) ಶ್ರೀ ಎಂ.ಎಸ್. ಆತ್ಮಾನಂದ ( ಮಂಡ್ಯ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು?

ಅ) ವಿಶ್ವೇಶ್ವರಯ್ಯ ನಾಲಾ ಆಧುನೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ;

ಆ) ಈ ಕಾಮಗಾರಿಗೆ ಅಂದಾಜು ವೆಚ್ಚವೆಷ್ಟು; ಎಷ್ಟು ಹಂತದಲ್ಲಿ ತೆಗೆದುಕೊಳ್ಳಲಾಗಿದೆ;

ಇ) ವಿಶ್ವೇಶ್ವರಯ್ಯ ನಾಲಾ ಆಧುನೀಕರಣ ಕಾಮಗಾರಿಗಳ ಅನುಷ್ಠಾನಕ್ಕೆ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ದೊರಕಿದೆಯೆ;

ಈ) ದೊರಕದಿದ್ದಲ್ಲಿ, ಕಾರಣಗಳೇನು?

ಶ್ರೀ ಹೆಚ್.ಕೆ.ಪಾಟೀಲ್ ( ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಹೌದು

ಆ) ಈ ಕಾಮಗಾರಿಗೆ ಒಟ್ಟಾರೆ ರೂ. 350.00 ಕೋಟಿಗಳಾಗಿರುತ್ತದೆ. ಈ ಕಾಮಗಾರಿಯನ್ನು ಒಂದೇ ಹಂತದಲ್ಲಿ ತೆಗೆದುಕೊಳ್ಳಲಾಗಿದೆ.

ಇ) ಹೌದು

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಮಂಡ್ಯ ಮತ್ತು ಮದ್ದೂರು ತಾಲ್ಲೂಕುಗಳನ್ನು ಏತ ನೀರಾವರಿ ಕಾಮಗಾರಿಗಳ ಅನುಷ್ಠಾನ**

1156 ( 1700) ಶ್ರೀ ಎಂ.ಎಸ್. ಆತ್ಮಾನಂದ ( ಮಂಡ್ಯ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ನೀರಾವರಿ ಇಲಾಖೆಯಿಂದ ಮಂಡ್ಯ ಜಿಲ್ಲೆಯಲ್ಲಿ ಏತ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೆ;

ಆ) ಹಾಗಿದ್ದಲ್ಲಿ ಮಂಡ್ಯ ತಾಲ್ಲೂಕು ಮತ್ತು ಮದ್ದೂರು ತಾಲ್ಲೂಕಿನಲ್ಲಿ ಕೈಗೊಂಡಿರುವ ಏತ ನೀರಾವರಿ ಕಾಮಗಾರಿಗಳ ವಿವರಗಳೇನು;

ಇ) ಈ ಕಾಮಗಾರಿಗಳು ಯಾವ ಹಂತದಲ್ಲಿದೆ?